**ಸಾಕ್ಷಿಯನ್ನು ದಿಃ16.07 .2019 ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. S.S.C. ವಕೀಲರಿಂದ 4 ನೇ ಪ್ರತಿವಾದಿ ಪರವಾಗಿ**

ನಾನು SSLC ಓದಿದ್ದೇನೆ. ನಾನು ಈಗ ಕರಹರಿ ಗ್ರಾಮದಲ್ಲಿ ಮತ್ತು ಕಲಬುರುಗಿಯಲ್ಲಿ ವಾಸವಿರುತ್ತೇನೆ. ನಾನು ಕಲಬುರುಗಿಯಲ್ಲಿ ನೌಕರಿ ಮಾಡುತ್ತಿದ್ದು ಕರಹರಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಕರಹರಿ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ರೇಷನ ಕಾರ್ಡ, ಮತದಾರರ ಗುರುತಿನ ಚೀಟಿ ಮತ್ತು ಆಧಾರ ಕಾರ್ಡ ಇರುತ್ತದೆ. ನನ್ನ ತಂದೆಯ ಹೆಸರು ಅಂಬಾರಾಯ ಕರಹರಿ ಗ್ರಾಮದಲ್ಲಿ ಖಾಯಂ ವಾಸ ಇರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಕರಹರಿ ಗ್ರಾಮದಲ್ಲಿ ಸರ್ವೇ ನಂ.08,173,171 ಮತ್ತು 301 ರಲ್ಲಿ ಒಟ್ಟು 19 ಎಕರೆ ಚಿಲ್ಲರ ಗುಂಟೆ ಜಮೀನು ಇರುತ್ತದೆ. ಸರ್ವೇ ನಂ. 301 ರಲ್ಲಿ 11 ಎಕರೆ ಚಿಲ್ಲರ ಗುಂಟೆ ಜಮೀನು ಇರುತ್ತದೆ. ಸರ್ವೇ ನಂ. 301 ಮತ್ತು 302 ರಲ್ಲಿ 2 ಎಕರೆ 19 ಗುಂಟೆ ಜಮೀನು ನನ್ನ ಅಜ್ಜಿ ನನ್ನ ಹೆಸರಿಗೆ ದಾನ ಮಾಡಿರುತ್ತಾರೆ. ಸರ್ವೇ ನಂ. 301 ರಲ್ಲಿ ಕೇವಲ 2 ಎಕರೆ ಜಮೀನು ನನ್ನ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ. ಆ ಆಸ್ತಿಯನ್ನು ಈ ದಾವೆದಲ್ಲಿ ಸೇರ್ಪಡೆ ಮಾಡಿಲ್ಲ ಅಂದರೆ ಅದು ಹಿರಿಯರ ಆಸ್ತಿ ಅಲ್ಲ ಅದು ನನ್ನ ಅಜ್ಜಿ ನನಗ ೆ ದಾನ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೇ ನಂ. 301 ರಲ್ಲಿ 2 ಎಕರೆ ಜಮೀನನ್ನು ನಮ್ಮ ಅಜ್ಜಿ ನನಗೆ ದಾನಪತ್ರ ಮಾಡಿದ್ದು ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ಸರ್ವೇ ನಂ. 301 ರಲ್ಲಿ 2 ಎಕರೆ ನಮ್ಮ ಹಿರಿಯರ ಆಸ್ತಿಯಾಗಿದ್ದು ಅದನ್ನು ನನಗೆ ದಾನವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿ ನನ್ನ ಹೆಸರಿನಲ್ಲಿ ಬರುವ ಮುಂಚೆ ನನ್ನ ತಾತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ನನ್ನ ತಂದೆಯ ಜಮೀನಿನಲ್ಲಿ ಬಾವಿ ಇದ್ದು ಮತ್ತು ಕೆನಾಲ ಹೋಗಿದೆ ಅಂತ ಹೇಳಿದ್ದು ಇಲ್ಲಿಯವರೆಗೆ ಆ ಕೆನಾಲಿನಲ್ಲಿ ನೀರಿಲ್ಲ ಮತ್ತು ಬಾವಿಯಲ್ಲಿ ನೀರಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ತಂದೆಯವರ ಜಮೀನಿಗೆ ವರ್ಷದಲ್ಲಿ 2-3 ಬಾರಿ ಹೋಗಿರುತ್ತೇನೆ. ನಮ್ಮ ತಂದೆಯ ಜಮೀನಿನಲ್ಲಿ ನೀರಾವರಿ ಬೆಳೆ ಮಾಡುತ್ತೇವೆ ಎಂದು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿರುವುದಿಲ್ಲ. ನಮ್ಮ ತಂದೆಗೆ ಜಮೀನು ಬಿಟ್ಟರೆ ಬೇರೆ ಏನು ವ್ಯಾಪಾರ ಇಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಹೆಂಡತಿ ಲಲಿತಾಬಾಯಿ ಮತ್ತು ಮಕ್ಕಳು ಪಂಚಾಯತಿ ಜಾಗದಲ್ಲಿ ಮನೆ ಕಟ್ಟಿ ಅಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಪಾಲಿಗೆ ಬಂದ ಜಮೀನುಗಳಾದ ಸರ್ವೇ ನಂ. 179 ರಲಿಲ್ಲಿ 3 ಎಕರೆ 27 ಗುಂಟಾ, ಸರ್ವೇ ನಂ. 170 ರಲ್ಲಿ 1 ಎಕರೆ 35 ಗುಂಟಾ, ಸರ್ವೇ ನಂ. 173 ರಲ್ಲಿ 2 ಎಕರೆ 28 ಗುಂಟೆ, ಸರ್ವೇ ನಂ. 8/6 20 ಗುಂಟೆ ಇಷ್ಟು ಮಾತ್ರ ಆಸ್ತಿಗಳನ್ನು ನಮ್ಮ ತಂದೆಯವರು ಸಾಗುವಳಿ

ಮಾಡುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ 16-17 ರ್ವ್ಷಗಳಿಗಂದ ಈ ಮೇಲೆ ಹೇಳಿದ ಜಮೀನುಗಳನ್ನು ಮಾತ್ರ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಇನ್ನು ಹಿಸ್ಸಾ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆಗೆ ಲಲಿತಾಬಾಯಿಂದ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾರೆಂದರೆ ಸರಿ. ನಮ್ಮ ತಂದೆ ಅವರ ಜೊತೆಯಲ್ಲಿ ಇರುತ್ತಾರೆ ಎಂದರೆ ಅವರು ಜೊತೆಗೆ ಮತ್ತು ನಮ್ಮ ತಾಯಿ ಜೊತೆಗೆ ಇರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾಯಿ ಮತ್ತು ನಾವು ಲಲಿತಾಬಾಯಿ ಮತ್ತು ಅವರ ಮಕ್ಕಳೊಂದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ-ತಾಯಿ ಮತ್ತು ನಾವು ಎಲ್ಲರೂ ಲಲಿತಾಬಾಯಿ ಮತ್ತು ಅವರ ಮಕ್ಕಳೊಂದಿಗೆ ಒಂದೇ ಮನೆಯಲ್ಲಿ ಇರುವ ಬಗ್ಗೆ ದಾಖಲೆ ಇದ್ದು ಆದರೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ನಾವು ಎಲ್ಲರೂ ಒಂದೇ ಮನೆಯಲ್ಲಿ ವಾಸವಿರುವ ಬಗ್ಗೆ ನ್ಯಾಯಾಲಯಕ್ಕೆ ಮತದಾರರ ಗುರತಿನ ಚೀಟಿ ಹಾಗೂ ರೇಷನ ಕಾರ್ಡ ಕೊಟ್ಟಿಲ್ಲ. ಲಲಿತಾಬಾಯಿರವರ ಹೆಣ್ಣುಮಕ್ಕಳ ಮದುವೆ ಆಗಿದೆ. ನಮ್ಮ ತಂದೆ ಆ ಹೆಣ್ಣುಮಕ್ಕಳ ಮದುವೆಯ ಸಂಪೂರ್ಣ ಖರ್ಚನ್ನು ಸರ್ವೇ ನಂ. 08, 173, 171 ಮತ್ತು 301 ಇವುಗಳ ಜಮೀನುಗಳ ಬಂದ ಆದಾಯದಿಂದ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಲಲಿತಾಬಾಯಿ ಹೆಣ್ಣುಮಕ್ಕಳ ಮದುವೆಯನ್ನು 3-4 ವರ್ಷಗಳ ಹಿಂದೆ ಮಾಡಿರುತ್ತಾರೆ. ನಾನು ಆ ಹೆಣ್ಣುಮಕ್ಕಳ ಮದುವೆಗಾಗಿ ಯಾವುದೇ ಹಣಕಾಸಿನ ಸಹಾಯ ಮಾಡಿಲ್ಲ. ನಮ್ಮ ತಂದೆಗೆ ಹಣದ ಸಹಾಯ ಮಾಡಿದ್ದು ಅವರು ಆ ಹಣದಿಂದ ಲಲಿತಾಬಾಯಿಯವರ ಮಕ್ಕಳು ಮದುವೆ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಲಲಿತಾಬಾಯಿ ಮಗ ಶಾಲೆಗೆ ಹೋಗುತ್ತಾರೆ. ಶಾಲೆಯ ಖರ್ಚನ್ನು ನಮ್ಮ ತಂದೆ ನೋಡಿಕೊಳ್ಳುತ್ತಾರೆ ಎಂದರೆ ಸರಿ. ನಮ್ಮ ತಂದೆಯವರು ಎಲ್ಲಾ ಜಮೀನಿನ ಉತ್ಪನ್ನದಿಂದ ಶಾಲೆ ಖರ್ಚನ್ನು ನೋಡಿಕೊಳ್ಳುತ್ತಾರೆ. ಸುಮಾರು 20 ವರ್ಷಗಳಿಂದ ನಾನು ಮತ್ತು ನನ್ನ ತಾಯಿ ಕರಹರಿ ಊರು ಬಿಟ್ಟು ಕಲಬುರುಗಿಯಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಈ ಕೇಸು ಆಗುವರೆಗೂ ನಾನು ನನ್ನ ತಂದೆಯ ಮನೆಗೆ ಬಂದಿಲ್ಲ ಮತ್ತು ಈಗಲೂ ಕೂಡಾ ಹೋಗಿಲ್ಲ ಎಂದರೆ ಸರಿಯಲ್ಲ.

ಶಿವಾನಂದ ನನ್ನ ಕಾಕನಾಗಬೇಕು. ಅವರು ನಮ್ಮ ತಂದೆಯ ಖಾಸಾ ತಮ್ಮ ಎಂದರೆ ಸರಿ. ಅವರು 3-4 ನೇ ತರಗತಿ ಓದಿರುತ್ತಾರೆ. ನನಗೆ ಮತ್ತು ನನ್ನ ತಂದೆಗೆ ಇರುವಷ್ಟು ವ್ಯವಹಾರ ಜ್ಞಾನ 4 ನೇ ಪ್ರತಿವಾದಿಗೆ ಇಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಸರ್ವೇ ನಂ. 179 ರಲ್ಲಿ 2 ಎಕರೆ ಜಮೀನು ಮಾರಾಟ ಮಾಡಿದ್ದೇವೆ ಎಂದರೆ ನಮ್ಮ ಅಜ್ಜ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಜಮೀನು ಕೂಡಾ ನಮ್ಮ ತಂದೆಯ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಆ ಜಮೀನಿನ ಮಾರಾಟ ಮಾಡಿದ ಹಣ ನಮ್ಮ ತಂದೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಜಮೀನು ಮಾರಾಟ ಮಾಡಲು ಯಾವುದೇ ಅವಶ್ಯಕತೆ ನಮ್ಮ ಕುಟುಂಬಕ್ಕೆ ಇರಲಿಲ್ಲ ಎಂದರೆ ಸರಿ. ಆ ಜಮೀನು ನನ್ನ ಅಜ್ಜನ ಹೆಸರಿನಲ್ಲಿ ಪಹಣಿ ಇತ್ತು ಎಂದರೆ ಸರಿ. ನನ್ನ

ಅಜ್ಜ ಖರೀದಿ ಪತ್ರಕ್ಕೆ ಸಹಿ ಮಾತ್ರ ಮಾಡಿದ್ದು ಖರೀದಿ ಮೊತ್ತವನ್ನು ನನ್ನ ತಂದೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಶಿವಾನಂದನಿಗೆ ಏನು ಕೊಡಬಾರದೆಂದು ಸಂಪೂರ್ಣ ಹಣ ನಾವೇ ಪಡೆದಿದ್ದೇವೆ ಎಂದರೆ ಸರಿಯಲ್ಲ. ಆ ನೋಂದಾಯಿತ ದಾಖಲೆಯಲ್ಲಿ ಶಿವಾನಂದರವರ ಸಹಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಶಿವಾನಂದ ನನ್ನ ತಂದೆಗೆ ಮತ್ತು ನಮ್ಮ ಅಜ್ಜನಿಗೆ ಜಮೀನು ಮಾರಾಟ ಮಾಡಲು ಒಪ್ಪಿಗೆ ಕೊಟ್ಟಿಲ್ಲ ಎಂದರೆ ಸರಿ.

2000 ನೇ ಇಸವಿಗಿಂತ ಮುಂಚೆ ನನ್ನ ತಾತ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದರು ಎಂದರೆ ಆವಾಗಲೂ ಮಾಡುತ್ತಿದ್ದರು ನಂತರ ಅವರು ತೀರಿಕೊಳ್ಳುವರೆಗೂ ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅವರು ತೀರಿಕೊಳ್ಳುವರೆಗೆ ಮನೆಯ ವ್ಯವಹಾರವನ್ನು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2000 ನೇ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಕೂಡಿ ಇರುವುದು ಆಗಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಆಸ್ತಿ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜರವರು ನನ್ನ ತಂದೆಗೆ ಮತ್ತು ಚಿಕ್ಕಪ್ಪನಿಗೆ ಜಮೀನು ಮತ್ತು ಮನೆಗಳನ್ನು ಹಂಚಿಕೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಶಿವಾನಂದರವರಿಗೆ ಸರ್ವೇ ನಂ.302/2 ರಲ್ಲಿ 11 ಎಕರೆ 23 ಗುಂಟೆ ಜಮೀನನ್ನು ನನ್ನ ಅಜ್ಜ ಹಂಚಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂ. 179,170,173 ಮತ್ತು 08/6 ಜಮೀನುಗಳನ್ನು ನನ್ನ ತಂದೆಗೆ ನಮ್ಮ ಅಜ್ಜ ಹಂಚಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಪಾಲು ಪಟ್ಟಿಯನ್ನು ಸ್ಟಾಂಪ ಪೇಪರ ಮೇಲೆ ಬರೆದಿದ್ದಾರೆ ಎಂದರೆ ಸರಿಯಲ್ಲ. ಸ್ಟಾಂಪ ಪೇಪರ ಮೇಲೆ ನಮ್ಮ ತಂದೆ, ನಮ್ಮ ಅಜ್ಜ, ಸೋದರತ್ತೆ ,ಚಿಕ್ಕಪ್ಪ, ಪತ್ರ ಬರಹಗಾರ ಮತ್ತು ಊರಿನ ಸಾಕ್ಷಿದಾರರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 20 ರೂ. ಛಾಪಾ ಕಾಗದದ ಮೇಲೆ ಬರೆದಿರುವ 2 ಪತ್ರಗಳನ್ನು ಸಾಕ್ಷಿಗೆ ಸಹಿಯನ್ನು ತೋರಿಸಿ ಸದರಿ ದಾಖಲೆಯ ಮೇಲೆ ಅವರ ತಂದೆ, ಚಿಕ್ಕಪ್ಪ ಮತ್ತು ಅಜ್ಜ ಮತ್ತು ಇತರೆ ಸಾಕ್ಷಿದಾರರು ಸಹಿಯನ್ನು ಗುರುತಿಸಲು ಕೇಳಿಕೋಡಿದ್ದು 20 ರೂ. ಛಾಪಾ ಕಾಗದದ ಮೇಲೆ ಬರೆದಿರುವರಿಂದ ಸದರಿ ದಾಖಲೆಗಳನ್ನು ಮುದ್ರಾಂಕ ಶುಲ್ಕ ಮತ್ತು ದಂಡ ಪಾವತಿಗಾಗಿ ಜಪ್ತು ಮಾಡಲಾಯಿತು ಹಾಗೂ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು**